# ಜಾನಪದ ಐತಿಹ್ಯಗಳಲ್ಲಿ ದಲಿತತತ್ವದ ನೆಲೆಗಳು

ವಿಜಯಲಕ್ಷ್ಮೀ ದೊಡ್ಡಮನಿ.
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಭಾಗ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ
ಕಡಗಂಚಿ,ಕಲಬುರಗಿ
ಮೊ.೬೩೬೨೨೮೪೪೦೮/
೯೭೩೧೩೨೭೧೨೯

ಜಾನಪದ ಜಗತ್ತು ಅದು ಜನಪರ ಸ್ವತ್ತು. ಮೌಖಿಕತೆ ಇದರ ಮೂಲ ಆಶಯವಾಗಿದೆ. ಇದು ಮಾನವ ಸಮಾಜದ ಒಟ್ಟು ಬದುಕನ್ನು ಪ್ರತಿನಿಧಿಸುತ್ತದೆ. ಇದರಲ್ಲಿಯೇ ಅತಿಮುಖ್ಯವಾದ ಪ್ರಕಾರಗಳಲ್ಲೊಂದು ಐತಿಹ್ಯ. ಐತಿಹ್ಯಗಳು ಪ್ರಾಚೀನವಾದ ಚಾರಿತ್ರಿಕ ಘಟನೆಗಳ ಪಳೆಯುಳಿಕೆಗಳು ಎಂಬಂತೆ ತೋರಿದರೂ ಎಲ್ಲವೂ ಹಾಗಲ್ಲ. ಕೆಲವು ಸ್ವಲ್ಪ ಮಟ್ಟಿಗೆ ಚಾರಿತ್ರಿಕ ಅಂಶವನ್ನು ಸೂಚಿಸಿದರೂ ಬಹಳಷ್ಟು ಪೌರಾಣಿಕ ಮತ್ತು ಕಾಲ್ಪನಿಕ ಅಂಶಗಳಿಂದ ಕೂಡಿದ್ದು ಆಕರ್ಷಕವಾಗಿರುತ್ತವೆ. ಸ್ವರೂಪದಲ್ಲಿ ಐತಿಹ್ಯಗಳು ತುಂಬಾ ಚಿಕ್ಕದಾಗಿದ್ದು, ಗದ್ಯಾತ್ಮಕವಾಗಿದ್ದು ಒಂದು ಅಥವಾ ಎರಡು ಆಶಯಗಳ ವ್ಯಾಪ್ತಿಯನ್ನಷ್ಟೇ ಪಡೆದಿರುತ್ತವೆ. ಅವು ವ್ಯಕ್ತಿ, ಸ್ಥಳ ಅಥವಾ ಘಟನೆಯೊಂದರ ವಿವರಣಾತ್ಮಕ ಕಥೆಗಳಾಗಿರುತ್ತವೆ. ಆದರೆ ಇವು ಸಂಪ್ರದಾಯ ಮೂಲದಿಂದ ಬಂದವುಗಳಾಗಿದ್ದು, ಐತಿಹ್ಯಗಳ ವ್ಯಾಪ್ತಿಯನ್ನು ಪಡೆದಿರುತ್ತವೆ. ತಾವೂ ಹುಟ್ಟಿದ ನಿಸರ್ಗಕ್ಕೆ ಅಂಟಿಕೊಂಡಿರುವುದು ಐತಿಹ್ಯಗಳ ಮತ್ತೊಂದು ವಿಶಿಷ್ಟ ಲಕ್ಷಣ. ಈ ಜನಪದರ ಐತಿಹ್ಯ ಕಥನಗಳಲ್ಲಿ ವಿವಿಧ ರೀತಿಯ ಕಥನಗಳನ್ನು ಕಾಣುತ್ತೇವೆ.

ಮದುವೆಗಳಲ್ಲಿನ ಅನೇಕ ಸಂಪ್ರದಾಯಗಳ್ನು ವೈಜ್ಞಾನಿಕ ಆಧಾರದ ಮೇಲೆ ರಚಿಸಲಾಗಿದೆ. ಅದನ್ನು ಜನರ ಬದುಕಿನಲ್ಲಿ ಗಟ್ಟಿಗೊಳಿಸುವ ಸಲುವಾಗಿ ಅನೇಕ ಪೌರಾಣಿಕ ಕತೆಗಳಲ್ಲಿ ಅಂತಹ ಆಚರಣೆಗಳನ್ನು ಕಟ್ಟುನಿಟ್ಟಾಗಿ ದಾಖಲಿಸಲಾಗಿದೆ. ಅವುಗಳಲ್ಲಿ ಅತ್ಯಂತ ಮುಖ್ಯವಾಗಿ ಗೋತ್ರ, ಜಾತಕ, ಕೌಟುಂಬಿಕ ಹಿನ್ನೆಲೆ, ಮುಹೂರ್ತ, ಕನ್ಯಾದಾನ, ಕಂಕಣಧಾರಣೆ, ಅಕ್ಷತೆಧಾರಣೆ, ಮಾಂಗಲ್ಯಧಾರಣೆ, ಲಾಜಾಹೋಮ, ಸಪ್ತಪದಿ, ಕಾಲುಂಗರಧಾರಣೆ, ಅರುಂಧತಿ ನಕ್ಷತ್ರ ವೀಕ್ಷಣೆ ಮುಂತಾದವು ಅತ್ಯಂತ ಪ್ರಮುಖವಾದವು. ವರಪೂಜೆ, ಕಾಶಿಯಾತ್ರೆ, ನಾಗೋಲಿ ಮುಂತಾದವುಗಳಿಗೆ ಸಾಮಾಜಿಕ ಸ್ಥಾನಮಾನವುಂಟಾದರೂ ವೈಜ್ಞಾನಿಕ ಮತ್ತು ವೈಚಾರಿಕ ಹಿನ್ನೆಲೆಯೇನೂ ಇಲ್ಲ. ಭಾರತದಲ್ಲಿನ ಜಾತಿ ವ್ಯವಸ್ಥೆಯು, ಜಾತಿಯ ಹೊರಗೆ ವಿವಾಹವನ್ನು ನಿಷೇಧಿಸುತ್ತದೆ. ಈ ಲೇಖನದಲ್ಲಿ ಎರಡು ಕತೆಗಳನ್ನು ಕುರಿತು ಚರ್ಚಿಸಲಾಗಿದೆ.

೧) ಮಾರಮ್ಮ: ಜಾತಿ ಸಂಕರದ ಕಥನ

'ಮಾರಮ್ಮನ ಮದುವೆ' ಅತ್ಯಂತ ಪ್ರಚಲಿತವಾದ, ಅಂತರ ಜಾತಿ ವಿವಾಹದ ಸಮಸ್ಯೆಯನ್ನು-ಪರಿಣಾಮಗಳನ್ನು ಬಿಚ್ಚಿಡುವ ಕತೆ. ಈ ಕತೆಯ ನಾಯಕಿ ಮೇಲ್ವರ್ಗಕ್ಕೆ ಸೇರಿದ ಒಬ್ಬ ಮಹಿಳೆ. ಆಸಾದಿಗಳು ಗ್ರಾಮದೇವತೆಯ ಹಬ್ಬದಲ್ಲಿ ಮಾರಮ್ಮನ ಕಥೆಯನ್ನು ವಿಸ್ತಾರವಾಗಿ ಹೇಳುತ್ತಾರೆ. ಚೌಡಿಕೆ ವಾದ್ಯದೊಂದಿಗೆ ಅವರು ಹಾಡುವ ಕಾವ್ಯ ಚಂಪೂ ಸ್ವರೂಪದ್ದು. ಗ್ರಾಮದೇವತೆಯ ಕುರಿತ ಈ ಪುರಾಣ ಕತೆಗಳು ಹಲವು ಕಾರಣಗಳಿಂದ ವಿಶಿಷ್ಟವಾಗಿದೆ. ಗೆಜ್ಜಲು ರಾಜನ ಪಟ್ಟಣದಲ್ಲಿ ಕದಿರಪ್ಪ-ಕದಿರಮ್ಮ ಎಂಬ ದಂಪತಿಗಳು. ಅವರ ಮಗನ ಹೆಸರೂ

ಕದಿರಪ್ಪ. ಇವರು ಮಾದಿಗ ಜನಾಂಗಕ್ಕೆ ಸೇರದವರು. ತಂದೆ ತಾಯಿಗಳು ಹುಡುಗನನ್ನು ಓದಲು ಕಳುಹಿಸಿದಾಗ ಜಾತಿಯ ಕಾರಣಕ್ಕಾಗಿ ಇವನನ್ನು ಹೊರಗೆ ಕೂರಿಸುತ್ತಾರೆ. ಇದರಿಂದ ಬೇಸರಗೊಂಡ ಕದಿರಪ್ಪ ಶಾಲೆಗೆ ಹೋಗದೆ ನಾನಾ ಸ್ಥಳಗಳಲ್ಲಿ ಅಲೆದು ಬರುತ್ತಾನೆ. ಇದನ್ನು ತಿಳಿದ ಅವನ ತಾಯಿ ಅವನನ್ನು ಹೊಡೆಯುತ್ತಾಳೆ. ಕದಿರಪ್ಪನಿಗೆ ಎರಡನೆಯ ಸಲ ಬೇಸರವಾಗಿ ಮನೆಯನ್ನು ತೊರೆದು ಹೊರಟು ಹೋಗುತ್ತಾನೆ. ಹೀಗೆ ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಒಂದು ಪಂಚಕಲ್ಯಾಣಿಯನ್ನು ಕಾಣುತ್ತಾನೆ. ಅದರೊಳಗೆ ತ್ರಿಮೂರ್ತಿಗಳು ಸ್ನಾನ ಮಾಡುತ್ತಿರುತ್ತಾರೆ. ಅವರು ಸ್ನಾನ ಮಾಡುವ ವಿಧಾನವನ್ನು ಚೆನ್ನಾಗಿ ಗಮನಿಸಿದ ಕದಿರಪ್ಪ ಅವರಿಗಿಂತ ಚೆನ್ನಾಗಿ ಅದೇ ಕಲ್ಯಾಣಿಯಲ್ಲಿ ಸ್ನಾನ ಮಾಡುತ್ತಾನೆ. ಇವನು ಮಡಿಯಾಗುವ ರೀತಿಯನ್ನು ಕಂಡು ದೇವತೆಗಳು ಜಲಜಲನೆ ಬೆವೆತುಹೋಗುತ್ತಾರೆ. ತ್ರಿಮೂರ್ತಿಗಳು ಕದಿರಪ್ಪನ ಜಾತಿ ಯಾವುದೆಂದು ಕೇಳುವರು. ಆಗ ಕದಿರಪ್ಪ "ಹಾವನಾಡು, ಗೋವನಾಡು, ಮರುಕುನಾಡು, ಇರೋಟಿ ಸಾಕಿ ಅಡ್ಡಗಂಧ ಬ್ರಹ್ಮಣರು [ವೆಂಕಂಭಟ್ಟ]" ಎಂದು ಹೇಳುವನು. ಕದಿರಪ್ಪ ಮಾತಿನಲ್ಲಿ ವಿಶ್ವಾಸವನ್ನು ತಳೆದು ತ್ರಿಮೂರ್ತಿಗಳು ಸಂತೋಷಗೊಳ್ಳುವರು. ಆಗ ವಿಷ್ಣುವು ಬ್ರಹ್ಮನನ್ನು ಕುರಿತು "ಇಂಥ ದೊಡ್ಡೋರ ಮಗನಿಗೆ ನಿಮ್ಮ ಮಗಳಾದ ಸತ್ಯಶ್ರೀ ಬಾಲಗೌರಿಯನ್ನು ಕೊಟ್ಟು ಲಗ್ನ ಮಾಡು" ಎಂದು ಹೇಳುವನು. ಬ್ರಹ್ಮ ಈ ಮಾತಿಗೆ ಒಪ್ಪುವನು. ಬ್ರಹ್ಮನು ಈ ಮಾತನ್ನು ತನ್ನ ಮಗಳಿಗೆ ತಿಳಿಸಿದಾಗ ಆಕೆ "ಬಂದ ನಾಯ ಬಂದಂಗೆ ಒಳಗೆ ಕರಕೋಬಾರದು, ಅದರ ಗೋತ್ರ, ಜಾತಿ, ನೀತಿ ಯಾವುದೆಂದು ತಿಳಿದು ಲಗ್ನವಾಗುತ್ತೇನೆ"ಎಂದಳು. ಆಗ ಬ್ರಹ್ಮ ಕದಿರಪ್ಪನನ್ನು ಮನೆಯಲ್ಲಿಯೇ ಉಳಿಸಿಕೊಂಡು ಕಾಮಧೇನುವನ್ನು ಕಾಯುವ ಕೆಲಸಕ್ಕೆ ಹಚ್ಚುತ್ತಾನೆ. ಕದಿರಪ್ಪ ಕಾಮಧೇನುವಿನ ಹಾಲಿನಲ್ಲಿ ಹಂಚಿಕಡ್ಡಿಯನ್ನು ಅದ್ದಿ. ಮುತ್ತುಗದ ಎಲೆಯ ಮೇಲೆ ವೇದಾಂತವನ್ನೆಲ್ಲಾ ಬರೆಯುತ್ತಾನೆ. ನಿತ್ಯವೂ ಬರೆದದ್ದನ್ನು ಹಸುವಿಗೆ ಗೊಂತಿನಲ್ಲಿ ಇಡುತ್ತಿರುತ್ತಾನೆ.

ಹಬ್ಬ ಬಂದಾಗ ಅತಿಥಿಗಳಿಗೆ ಊಟವನ್ನು ಬಡಿಸಲು ಬ್ರಹ್ಮನಿಗೆ ಎಲೆ ಸಿಗುವುದಿಲ್ಲ. ಆತನು ವಿಷ್ಣುವಿನ ಹತ್ತಿರ ಹೋಗಿ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾನೆ. ವಿಷ್ಣು "ನಿಮ್ಮ ಮನೆಯಲ್ಲಿರುವವನು ಜಾತಿವಂತನಾದರೆ ಊಟದ ಎಲೆಯನ್ನು ಹಸುವಿನ ಗೊಂತಿನಲ್ಲಿ ಇಟ್ಟಿರುತ್ತಾನೆ ಹೋಗಿ ನೋಡು" ಎನ್ನುತ್ತಾನೆ. ಬ್ರಹ್ಮ ನೋಡಿದಾಗ ಎಲೆಯ ಬಿಂಡಿ ದೊರೆಯುತ್ತದೆ. ತ್ರಿಮೂರ್ತಿಗಳು, ಸತ್ಯಶ್ರೀ ಬಾಲಗೌರಿಯೂ ಅಲ್ಲಿಗೆ ಬರುತ್ತಾರೆ. ಎಲೆಯ ಕಟ್ಟನ್ನು ಬಿಚ್ಚಿದಾಗ ವೇದಗಳನ್ನು ವೆಂಕಂಭಟ್ಟ ಬರೆದಿರುವುದನ್ನು ಕಂಡು ವಿಸ್ಮಯಗೊಳ್ಳುತ್ತಾರೆ. ಇಂತವನನ್ನು ಮನೆಯಲ್ಲಿ ಜೀತಕ್ಕಿಟ್ಟುಕೊಳ್ಳುವುದು ಸೂಕ್ತವಲ್ಲವೆಂದು ತಿಳಿದು ಪುರೋಹಿತರಲ್ಲಿಗೆ ಬರುತ್ತಾರೆ."ಹೆಣ್ಣಾವ ಜಾತಿಯಾಗಲೀ, ಗಂಡಾವ ಜಾತಿಯಾಗಲೀ, ಮರ್ಮವ ಬಿಟ್ಟು ಕೊಡದೆ ಲಗ್ನವನ್ನು ನಿಶ್ಚಯಿಸಬೇಕು" ಎಂದು ವಿಷ್ಣು ಪುರೋಹಿತರಿಗೆ ಹೇಳುತ್ತಾನೆ. ವೆಂಕಂಭಟ್ಟ ಮತ್ತು ಸತ್ಯಶ್ರೀ ಬಾಲಗೌರಿಯ ವಿವಾಹವಾಗಿ ಬ್ರಹ್ಮನು ಕಂದಗಿರಿ ಪಟ್ಟಣವನ್ನು ಮಗಳ ಹೆಸರಿಗೆ ಬರೆದು ಗಂಡನ ಜೊತೆಯಲ್ಲಿ ಕಳುಹಿಸಿಕೊಟ್ಟ"೧.

"ಕದಿರಪ್ಪನ ತಾಯಿ ಕದಿರಪ್ಪನನ್ನು ಹುಡುಕುತ್ತಾ ಬರುತ್ತಾಳೆ. ಆಗ ಕದಿರಪ್ಪ ತಾಯಿಗೆ ಹೊಸ ಬಟ್ಟೆ ತೊಡಿಸಿ, ತಲೆ ಬೋಳಿಸಿ, ಮೂಗಿಯಂತಿರಬೇಕೆಂದು ಹೇಳಿ ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಅತ್ತೆಯನ್ನು ಬಾಲಗೌರಿಯು ಆನಂದದಿಂದ ಸತ್ಕರಿಸುತ್ತಾಳೆ.ಊಟ ಮಾಡುವಾಗ ತಾಯಿಗೆ ಇರುಸು ಮುರುಸಾಗಿ ಮಗನನ್ನು ಕುರಿತು "ಇದ್ಯಾಕಲೇ ನನ್ಮಗನೆ ಕದರ ತುಪ್ಪದ ಎಂಜಲಿಗೋಸ್ಕರವಾಗಿ ಈ ಬ್ರಾಹ್ಮಣರ ಮನೆ ಒಳಗೆ ಎಂಜಲು ತಿಂದ್ಕಂಡು ಬಿದ್ಕಂಡಿದ್ದೀಯಲ್ಲ' ಎಂದಳು. ಈ ಮಾತುಗಳನ್ನು ಕೇಳಿಸಿಕೊಂಡ ಸತ್ಯಶ್ರೀ ಬಾಲಗೌರಿಗೆ ತನ್ನ ಗಂಡನ ಜಾತಿ ಯಾವುದೆಂದು ಗೊತ್ತಾಯಿತು. ತನ್ನ ಮನೆಗೆ ಬೆಂಕಿ ಇಟ್ಟಳು. ತನ್ನ ಗಂಡನಿಗೆ ಕೋಣವೇಗೌಡನ ಸರಳೆಮ್ಮ

ಗರ್ಭದಲ್ಲಿ ಕೋಣವಾಗಿ ಹುಟ್ಟುವಂತೆಯೂ ತಾನು ಗ್ರಾಮದೇವತೆಯಾಗಿ ಆ ಕೋಣವನ್ನು ಬಲಿ ತೆಗೆದುಕೊಳ್ಳುವುದಾಗಿಯೂ ಶಾಪ ಕೊಟ್ಟಳು. ಹಿರಿಯ ಮಗನನ್ನು ಅಸಾದಿ ಆಗುವಂತೆಯೂ, ತನ್ನ ಅತ್ತೆಯು ಗೋರಿ ಕಂಬವಾಗಿ ಹುಟ್ಟುವಂತೆಯೂ ಶಾಪಕೊಟ್ಟು ತಾನು ಸಜೀವ ದಹನವಾದಳು"೨.

ಈ ಮಾರಮ್ಮನಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಅಂತರ ಜಾತಿ ವಿವಾಹಕ್ಕೆ ಒಳಗಾಗುವ ಕನ್ಯೆ ಬಹಳ ಸಂದರ್ಭದಲ್ಲಿ ಬ್ರಾಹ್ಮಣ ಕನ್ಯೆಯಾಗಿರುತ್ತಾಳೆ. ಕೆಲವೊಂದು ಬಾರಿ ಮಾತ್ರ ಲಿಂಗಾಯತ ಕನ್ಯೆಯಾಗಿರುತ್ತಾಳೆ. ಅದೇ ರೀತಿಯಾಗಿ ಕೆಳಜಾತಿಯ ಹುಡುಗ ಬಹಳ ಸಲ ಮಾದಿಗನಾಗಿರುತ್ತಾನೆ. ಕೆಳಜಾತಿಯ ಯುವಕ ಸಾಮಾಜಿಕ ಅಂತಸ್ಥನ್ನು ಪಡೆಯಲು ಇಚ್ಚಿಸುವುದು, ಹೊಸ ಬದಲಾವಣೆಗೆ ಹಪ ಹಪಿಸುವ ಹಂಬಲವನ್ನು ಕಾಣುತ್ತೇವೆ. ದಲಿತ ಯುವಕನ ಪ್ರತಿಭೆ ಅಗಾಧವಾದುದು ಪಂಚಕಲ್ಯಾಣಿಯಲ್ಲಿ ತ್ರಿಮೂರ್ತಿಗಳು ಸ್ನಾನ ಮಾಡುವುದನ್ನು ಕಂಡು ಅವನು ಅವರನ್ನು ಮೀರಿಸುವಂತೆ ಸ್ನಾನ ಮಾಡುತ್ತಾನೆ. ಈ ದೃಶ್ಯವನ್ನು ಕಂಡು ತ್ರಿಮೂರ್ತಿಗಳು ದಿಘಭ್ರಮೆಗೊಳ್ಳುತ್ತಾರೆ. ಈ ಘಟನೆ ಅವನ ಸೂಕ್ಷ್ಮ ಪ್ರವೃತ್ತಿಗೆ ಸಾಕ್ಷಿಯಾಗಿದೆ. ಇದು ಅವನ ಶ್ರದ್ಧೆ ಮತ್ತು ಆಸಕ್ತಿಯನ್ನು ಸೂಚಿಸುತ್ತದೆ. ದಲಿತರು ಪ್ರತಿಭೆಯನ್ನು ಹೊಂದಿರುವುದು ಸರ್ವೇ ಸಾಮಾನ್ಯವಾಗಿ ಅವರ ಮೂಲ ನೆಲೆಯಾಗಿದೆ. ಅದನ್ನ ಅರಿತುಕೊಂಡು ಸೂಕ್ತವಾಗಿ ಬಳಸಿಕೊಳಬೇಕು ಅಷ್ಟೆ. ಈ ಕಥೆಯಲ್ಲಿ ಅಕ್ಷರಾಭ್ಯಾಸದ ಹಂಬಲವಿದ್ದು ಅದನು ಪಡೆಯಲು ಶೋಷಣೆಯ ವಿರುದ್ಧ ಅವನು ಸುಳ್ಳಿನ ಮಾರ್ಗ ಹಿಡಿಯುತ್ತಾನೆ. ದಲಿತರು ದಡ್ಡರಲ್ಲ ಅವರು ಪ್ರತಿಭಾವಂತರೆ, ಅವರಿಗೂ ಅವಕಾಶ ಕೊಟ್ಟರೆ ಎಲ್ಲವನ್ನು ನಿರ್ವಹಿಸಬಲ್ಲ ಶಕ್ತಿಯಿದೆ ಎನುವುದು ಈ ಕಥೆಯಿಂದ ತಿಳಿದುಕೊಳಬಹುದು.

ಈ ಕಥೆಯಲ್ಲಿ ಪ್ರತಿರೋಧಾತ್ಮಕವಾದ ನೆಲೆಗಳನ್ನು ಕಾಣುತ್ತೇವೆ. ಪಂಚಮ ವರ್ಣದ ಯುವಕ ಸುಳ್ಳುಹೇಳಿ ಉಚ್ಚವರ್ಣದ ಹೆಣ್ಣನ್ನು ಮದುವೆ ಆಗುವುದು ಮತ್ತು ಯುವಕನ ತಾಯಿ "ಇದ್ಯಾಕ ನನ್ಮಗನೆ  ಕದರ ತುಪ್ಪದ ಎಂಜಲಿಗೋಸ್ಕರ ಬ್ರಾಹ್ಮಣರ ಮನೆಯಲ್ಲಿ ಎಂಜಲ ತಿಂದ್ಕೊಂಡು ಬಿದ್ಕಂಡಿಯಲ್ಲ?"೩ ಎಂಬ ಮಾತು ಬ್ರಾಹ್ಮಣರ ಆಹಾರ ವ್ಯವಸ್ಥೆಯನ್ನು ತಿರಸ್ಕರಿಸುವುದರ ಜೊತೆಗೆ ತಮ್ಮ ಮೂಲ ಆಹಾರವಾಗಿ ತಲೆತಲಾಂತರದಿಂದ ಬಳಕೆ ಮಾಡುತ್ತಲೆ ಬಂದ 'ಬಾಡಿ'ನ ನೆನಪು ಅವರ ಮೂಲ ಆಹಾರದ ಶ್ರೇಷ್ಠತೆ ಬಗ್ಗೆ ತಿಳಿಸುತ್ತದೆ. ಇಲ್ಲಿ ಯಾವ ಆಹಾರವು ಶ್ರೇಷ್ಠ ಮತ್ತು ಕನಿಷ್ಠವಲ್ಲ, ಅವರವರ ಆಹಾರ ಕ್ರಮದ ಬಗ್ಗೆ ಅವರಿಗೆ ಇರುವ ಪ್ರೀತಿ ಮತ್ತು ಗೌರವ ಅಷ್ಟೆ.ಇಲ್ಲಿ ಕೆಳಜಾತಿಯ ಯುವಕನ ಪಾಂಡಿತ್ಯ, ಪ್ರೇಮವು ವ್ಯಕ್ತವಾಗಿದೆ. ಈ ಪಾಂಡಿತ್ಯವನ್ನು ಗಳಿಸುವ ಕಾರಣದಿಂದಲೇ ಆರಂಭದಲ್ಲಿ ಅವನು ಸುಳ್ಳು ಹೇಳುತ್ತಾನೆ. ನಂತರ ಇದು ಬ್ರಾಹ್ಮಣ ಕನ್ಯೆಯೊಡನೆ ಅವನ ವಿವಾಹದಲ್ಲಿ ಬೆಳದು, ತಾಯಿಯ ಪ್ರವೇಶವಾದ ಮೇಲೆ ದುರಂತದಲ್ಲಿ ಕೊನೆಗಾಣುತ್ತದೆ. ಕೆಳಜಾತಿಯ ಯುವಕ ಸಾಮಾಜಿಕ ಅಂತಸ್ತನ್ನು ಪಡೆಯಲು ಇಚ್ಚಿಸುವುದು ಸಾಮಾನ್ಯವಾದ ಅಂಶವಾಗಿದೆ. ದಲಿತರಿಗೆ ಅಕ್ಷರ ಜ್ಞಾನ ಕೊಡಬಾರದು ಎಂಬ ಬ್ರಾಹ್ಮಣರ ಮನಸ್ಥಿತಿ ಎಂದಿನಿಂದಲೂ ಒಂದೇ ಆಗಿದೆ. ಯುರೇಶಿಯನ ಬ್ರಾಹ್ಮಣರು ಬರೆದಂತಹ ಧರ್ಮ ಗ್ರಂಥದಲ್ಲಿ;–"ಶೂದ್ರಾತಿ ಶೂದ್ರರಿಗೆ ಒಂದು ಅಕ್ಷರದ ಜ್ಞಾನಕೂಡ ಕೊಡುವಂತಿಲ್ಲಿ ಶೂದ್ರಾತಿ ಶೂದ್ರರಿಗೆ ಶಿಕ್ಷಣ ಪಡೆಯಲು ನಿರ್ಬಂಧಗಳನ್ನು ಹೇರಲಾಗಿತ್ತು…೪"ಇಲ್ಲಿನ ಮೂಲ ನಿವಾಸಿಗಳು ಶಿಕ್ಷಿತರಾಗಬಾರದೆಂಬ ಉದ್ದೇಶದಿಂದಲ್ಲೇ ನಾವು ಧರ್ಮಗ್ರಂಥವನ್ನು ಬರೆದು ಅವರಿಗಾಗಿ ಕಲಿಯುವ ಬಾಗಿಲನು ಮುಚ್ಚಿದ್ದೇವೆ…"೫ ."ಇಲ್ಲಿಯ ತನಕ ಯಾರಾದರು ಮೂಲ ನಿವಾಸಿ ವಿಧ್ಯೆಕಲಿತು ಶಿಕ್ಷಿತನಾಗಿ ಜ್ಞಾನ ಸಂಪಾದಿಸಿದರೆ ಅವರ ತಲೆಯನ್ನ ಕಡಿಯಲಾಗುತ್ತಿತ್ತು"…೬"ನಮ್ಮ ಯಾವುದಾದರೊಂದು ಪ್ರತಿಮೆಯನ್ನು ಗುರು ಎಂದು ತಿಳಿದು ಯಾರೋ ಆದಿವಾಸಿ ಧನುರ್ ವಿದ್ಯೆಯನ್ನು ಕಲಿತರೆ ಅವನ ಬಲಗೈ ಹೆಬ್ಬೆರಳನ್ನು ಕತ್ತರಿಸಿದ್ದೆವೆ. ಏಕೆಂದರೆ ಜೀವನದಲ್ಲಿ ಮುಂದೆ ಯಾವತ್ತು

ಅವನು ಬಾಣ ನಡೆಸಬಾರದು...”೭ಈ ರೀತಿಯಾಗಿ ಅವರ ಧರ್ಮ ಗ್ರಂಥಗಳು ಹೇಳುತ್ತವೆ. ಈಗ ಪ್ರಸ್ತುತ ದಿನದಲ್ಲಿ ಈ ಸಮಸ್ಯೆ ರೂಪಾಂತರವಾಗಿದೆ ಅಷ್ಟೆ, ಅಂದು ದಲಿತರಿಗೆ ಶಾಲೆಯ ಒಳಗೆ ಪ್ರವೇಶವಿರಲಿಲ್ಲ. ಅವರು ಹೊರಗಿನಿಂದಲೇ ವಿದ್ಯೆ ಕಲಿಯಬೇಕಿತ್ತು. ಇಂದು ಶಾಲೆಯ ಒಳಗಿದ್ದೇವೆ. ಆದರೆ ವಿಚಾರ ಮತು ಜ್ಞಾನದಲ್ಲಿ ಮಕ್ಕಳನು ವಿಚಾರವಂತರಾಗಿ ಮಾಡುವ ಬದಲು ಇಂದು ಅವರನು ಅಜ್ಞಾನದ ಕಡೆಗೆ ನೂಕುವುದರಲ್ಲಿ ಶಾಲೆಗಳ ಮೊದಲ ಹೆಜ್ಜೆ ಪ್ರಾರಂಭವಾಗಿದೆ. ಶಿಕ್ಷಣದ ಮೂಲಕ ಎಳೆಯ ಮಕ್ಕಳ ಮನಸ್ಸಿನಲ್ಲಿ ಪರೋಕ್ಷವಾಗಿ ಕೋಮುವಾದ, ಜಾತಿವಾದವನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಸಮಸ್ಯೆಗಳ ಸ್ವರೂಪ ಬದಲಾಗಿದೆ ಅಷ್ಟೆ. ಈ ಕಥೆಯಲ್ಲಿ ಮಾದಿಗರ ಹುಡುಗನಿಗೆ ಶಾಲೆಯ ಹೊರಗೆ ಕೂರಿಸುತ್ತಾರೆ. ಇದರಿಂದ ಅವಮಾನಗೊಂಡ ಹುಡುಗ ಶಾಲೆಗೆ ಹೋಗುವುದಿಲ್ಲ. ಮನೆಗೆ ಮರಳಿದಾಗ ತಾಯಿಯಿಂದ ಹೊಡೆಸಿಕೊಂಡು ಆ ಊರೆ ಬಿಟ್ಟು ಹೋಗುತ್ತಾನೆ. ಇದು ಅವನೊಳಗೆ ಆದ ತರ್ಕಬದ್ದವಾದ ಬೆಳವಣಿಗೆಯೆಂದೆ ಹೇಳಬಹುದು. ಹುಡುಗ ಸೂಕ್ಷ ್ಮ ಪ್ರವೃತ್ತಿಯವನೂ, ಸಂವೇದನಾಶೀಲನೂ ಆಗಿರುವುದನ್ನು ಕಾಣುತ್ತೇವೆ. ಶಾಲೆಯಿಂದ ಹೊರ ಹಾಕಿದಾಗಲೆ ಅವನ ತಲೆಯಲ್ಲಿ ಬ್ರಾಹ್ಮಣರ ಆಚಾರ, ವಿಚಾರಗಳ ಬಗ್ಗೆ ಕುತೂಹಲ ಹುಟ್ಟಿರುವ ಸಾಧ್ಯತೆ ಇದೆ. ಏನಾದರು ಸರಿ ತಾನು ವಿದ್ಯೆ ಕಲಿಯಲೆಬೇಕು, ಎಂಬ ಅದಮ್ಯವಾದ ಬಯಕ್ಕೆ ಅವನೊಳಗೆ ಮೂಡಿರಬೇಕು. ಇಲ್ಲಿಂದಲೆ ತನ್ನ ವಿದ್ಯಾರ್ಜನೆಯ ಮೊದಲೆ ಹೆಜ್ಜೆಯನ್ನು ಪ್ರಾರಂಭಿಸುತ್ತಾನೆ. ಶುಭ್ರತೆಯೇ ಉತ್ತಮರ ಪ್ರಮುಖ ಗುಣಲಕ್ಷಣವೆಂದು ಅರಿತ ಬಾಲಕ ಶುಭ್ರತೆಯಲ್ಲಿಯೆ ಅವರನ್ನು ಮೀರಿಸುತ್ತಾನೆ ಊರನ್ನು ತೊರೆದಾಗಲೇ ಆತ ಬ್ರಾಹ್ಮಣ ವೇಷಧಾರಿಯಾಗಿರಬೇಕು ಏಕೆಂದರೆ ತ್ರಿಮೂರ್ತಿಗಳು ಅವನ ಜಾತಿಯನ್ನು ಕೇಳಿದಾಗ ಆತ ಬ್ರಾಹ್ಮಣನೆಂದು ಹೇಳುವುದರಿಂದ ಮೇಲಿನ ಊಹೆಗೆ ಅವಕಾಶವಿದೆ.ಕೆಳಜಾತಿಯವನಾದ ಈತನಿಗೆ ಇರುವ ಕಲಿಕೆಯ ದಾಹವೇ ಇವನ ಮುಂದಿನ ಗೆಲುವಿಗೆ ಕಾರಣವಾಗುತ್ತದೆ. ಊಟದ ಎಲೆಯಲ್ಲಿ ವೇದವನ್ನು ಬರೆದ ಅವನ ಬುದ್ಧಿಶಕ್ತಿಯೇ ಅವನಿಗೆ ಬೆಂಬಲವಾಗುತ್ತದೆ. ಕದಿರಪ್ಪನ ತಾಯಿ ಅವನನ್ನು ನೋಡಲು ಬಂದಾಗ, ಅವನು ತೋರುವ ದೂರದೃಷ್ಟಿ, ಭವಿಷ್ಯತ್ತಿನ ಬಗ್ಗೆ ಅವನಿಗಿರುವ ಅರಿವನ್ನು ತೋರಿಸುತ್ತದೆ. ಅದಕ್ಕಾಗಿ ಅವನು ತಾಯಿಯನ್ನು ಮೂಕಿಯಾಗಿ ಮಾಡಿ, ಅವಳಿಗೆ ಬ್ರಾಹ್ಮಣ ವಿಧವೆಯೆ ವೇಷ ಹಾಕುತ್ತಾನೆ. ಇದರಿಂದ ಅವನು ಸೃಷ್ಟಿಸಿದ ಸುಂದರ ಭವಿಷ್ಯದ ಕೋಟೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಪ್ರಯತ್ನಿಸುತ್ತಾನೆ.

ಇಲ್ಲಿ ಅಂತರ ಜಾತಿ, ವಿವಾಹ ಮಾರಮ್ಮನ ಸಿಟ್ಟಿಗೆ ಕಾರಣವಾಯಿತು. ಜಾತಿ ಎನ್ನುವ ಕಪ್ಪು ಛಾಯೆ ಅವಳ ಕಣ್ಣು, ಮನಸ್ಸು, ಮನುಷ್ಯತ್ವದ ಮೇಲೆಲ್ಲಾ ತನ್ನ ಕಪ್ಪು ನೆರಳು ಹರಡಿರುವುದನ್ನು ಕಾಣುತ್ತೇವೆ. ಅವಳು ಸಾಯಲು ನಿರ್ಧರಿಸಿರುವುದಕ್ಕೆ ಮುಖ್ಯ ಕಾರಣ ಅವಳು ಬೆಳೆದು ಬಂದ ವಾತಾವರಣ, ಸಮಾಜ, ಸಂಪ್ರದಾಯ ಎಂಬ ಕಟ್ಟಳೆಗಳೆ. ತಾನು ಕೀಳು ಕುಲದವನನ್ನು ವರಿಸಿದ ಸುದ್ಧಿ ಸಮಾಜಕ್ಕೆ ತಿಳಿದರೆ ತನ್ನ ಜೊತೆಗೆ ಅವರು ನಡೆದುಕೊಳ್ಳಬಹುದಾದ ವರ್ತನೆಯನ್ನು ಕಲ್ಪಸಿಕೊಂಡೆ ಅವಳು ಈ ನಿರ್ಧಾರಕ್ಕೆ ಬರುತ್ತಾಳೆ. ಸಂಪ್ರದಾಯವನ್ನು ಮುರಿದು ಸಮಾಜದ ವಿರುದ್ಧ ಹೋದ ಹೆಣ್ಣಿನ ಪರಿಸ್ಥಿತಿಯನ್ನು ಅವಳು ಈ ಹಿಂದೆ ಕೇಳಿದ/ನೋಡಿದ ಘಟನೆಗಳೆ ಅವಳ ಈ ನಿರ್ಧಾರಕ್ಕೆ ಕಾರಣಿಭೂತವಾಗಿರಬೇಕು. ಸಂಪ್ರದಾಯ, ಸಂಸ್ಕೃತಿ ಎಂಬ ಮೂಡ ಆಚರಣೆಯಲ್ಲಿಯೇ ಬೆಳೆದು ಬಂದ ಹೆಣ್ಣು, ಅದಕ್ಕೆ ದಕ್ಕೆ ಬಂದಾಗ ಅವಳು ಮೊದಲು ವಾಲುವುದು ತನಗೆ ಹಿರಿಯರಿಂದ ಬಂದ ಪಾಠದ ಕಡೆಗೆ. ಆ ಸಂಪ್ರದಾಯದ ಪಾಠದ ಮುಂದೆ ತನ್ನ ಮಗು, ಪ್ರೀತಿಯಿಂದ ನೋಡಿಕೊಂಡ ಒಲವಿನ ಗಂಡನನ್ನು ಸಹ ಮರೆಸಿ ಬಿಡುತ್ತದೆ. ಮನುಷ್ಯನನ್ನು ಮನುಷ್ಯನಾಗಿ ನೋಡಬೇಕಾದ ಕ್ಷಮಯಾಧರಿತ್ರಿಯೇ ಮಾರಿಯಾಗಿ, ಮಗ, ಗಂಡನ ರಕ್ತ ಹೀರುವಂತಹ ವಿಕೃತ ಮನಸ್ಸಿಗೆ ಅವಳು ಬರುವುದಕ್ಕೆ, ಅವಳು ಬೆಳೆದು ಬಂದ ಸಂಪ್ರದಾಯವೇ

ಕಾರಣ. ಅವಳನ್ನು ಈ ರೀತಿಯಾಗಿ ತಯಾರಿಸಲು ಅದೆಷ್ಟು ದಿನಗಳ ಪ್ರವಚನಗಳು ಕಾರಣವಾಗಿರುತ್ತವೆಯೋ? ಅವಳ ಒಳ ಮನಸ್ಸು ಇಂಥ ಕಟ್ಟಳೆಗಳಿಂದ ಬಿಡುಗಡೆಗಾಗಿ ಆ ಸಮುದಾಯದ ಹೆಣ್ಣು ಮಕ್ಕಳು ಹಪ ಹಪಿಸಿದರು, ತಲತಲಾಂತರದಿಂದ ಬೇಡಿಯಲ್ಲಿ ಬಂಧಿಯಾಗಿ, ಬಿಗಿ ಹಿಡಿದು ಕೀಳುಗಟ್ಟಿರುವ ಕೊಂಡಿಯಿಂದ, ಅವಳು ಕೊನೆಗೂ ಬಿಡಿಸಿಕೊಳಲು ಆಗದೆ ಅದರಲ್ಲಿಯೆ ನಲುಗಿ ತನ್ನ ತಾನು ದಹಿಸಿಕೊಳ್ಳುತ್ತಾಳೆ.

ಕೆಳಜಾತಿಯವನಿಗೆ ವರಿಸಿದ ಪಶ್ಚಾತಾಪದಲ್ಲಿ ಸಿಟ್ಟಿನಿಂದ ಬೆಂಕಿಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾಳೆ. ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿಯಾಗಿದೆ? ಅವಳ ಕುಟುಂಬದವರೆ ಅವಳನ್ನು ಕೊಲೆಮಾಡಿರುವ ಸಾದ್ಯತೆಗಳು ಇವೆ. ಇದು ಒಂದು ಮರ್ಯಾದೆಗೇಡು ಹತ್ಯೆಯು ಆಗಿರಬಹುದು. ನಾವು ಗಮನಿಸಬೇಕಾದ ವಿಷಯವೆಂದರೆ ಮಕ್ಕಳ ವಿದ್ಯಾಭ್ಯಾಸದ ಸಂದರ್ಭದಲ್ಲಿ ಗಂಡನ ಜಾತಿ ಸೂಕ್ಷ್ಮವಾಗಿ ಅವಳ ಗಮನಕ್ಕೆ ಬಂದಿದ್ದರು, ಅವಳು ಅದನ್ನು ಲಕ್ಷಿಸದೆ ಸುಮ್ಮನಿರುತ್ತಾಳೆ. ಇದಕ್ಕೆ ಕಾರಣ ಅವಳಿಗೆ ಗಂಡ, ಮಕ್ಕಳ ಮೇಲೆ ಇರುವ ಪ್ರೀತಿ. ಅತ್ತೆ ಮಾಂಸ ಊಟದ ರುಚಿಯನ್ನು ನೆನಪಿಸಿಕೊಂಡಾಗ ಅವಳಿಗೆ ಆಂತವಾಗುತ್ತದೆ. ಅವಳು ಕೋಪದ ಕೈಯಲ್ಲಿ ಬುದ್ಧಿಕೊಡದೆ ಆ ವಿಚಾರವಾಗಿ ಕೂಲಂಕುಷವಾಗಿ ಆಲೋಚಿಸಿ, ಮುಂದಿನ ದಿನಗಳಲ್ಲಿ ತನ್ನ ಸಂಸಾರದ ಮೇಲೆ ಬರಬಹುದಾದ ಅಪಾಯವನ್ನು ಮನಗಂಡು, ತನ್ನ ಪ್ರಾಣವನ್ನು ಕಳೆದುಕೊಳ್ಳಲು ನಿರ್ಧರಿಸುತ್ತಾಳೆ. ತನ್ನ ನಂತರ ತನ್ನ ವೈದಿಕ ಸಮಾಜ ಗಂಡ, ಮಕ್ಕಳಿಗೆ ಕೊಡಬಹುದಾದ ಶಿಕ್ಷೆಯನ್ನು ಮನಗಂಡ ಅವಳು ತಾನೆ ಅವರಿಗೆ ಶಾಪದ ಮೂಲಕ ಮುಕ್ತಿ ಮತ್ತು ಮರು ಹುಟ್ಟನ್ನು ಕೊಡುವುದಾಗಿ ಯೋಚಿಸಿರಬೇಕು. ಕೋಣವೇ ಗೌಡನ ಸರಳೆಮ್ಮ ಗರ್ಭದಲ್ಲಿ ಕೋಣವಾಗಿ ಹುಟ್ಟುವಂತೆ' ಶಾಪ ಕೊಡುತ್ತಾಳೆ. ಇದಕ್ಕೆ ಈ ರೀತಿಯಾದ ಕಾರಣವು ಇರಬಹುದು.ಅವಳು ಮಾರಿದೇವತೆಯಾಗಿ ಗೌಡನನ್ನು ಪೀಡಿಸಲು ಪ್ರಾರಂಭಿಸುತ್ತಾಳೆ. ತನ್ನ ಮತ್ತು ತನ್ನ ಕುಟುಂಬದ ಸಾವಿಗೆ ಕಾರಣವಾದ ಮೇಲ್ವರ್ಗದವರ ಮೇಲೆ ಈ ರೀತಿಯಾಗಿ ಪ್ರತೀಕಾರ ತೀರಿಸಿಕೊಂಡಿರುವ ಸಾಧ್ಯತೆಗಳಿವೆ. ಯಾವ ಜಾತಿಯ ಕಾರಣಕ್ಕೆ ಗಂಡನಿಗೆ ಶಾಪ ಕೊಡುತ್ತಾಳೊ ಅದೇ ಕೋಣವನ್ನು ಬಲಿಕೊಡುವಾಗ ಊರ ಮೆರವಣಿಗೆಯ ಸಂದರ್ಭದಲ್ಲಿ ಪ್ರತಿ ಮೇಲ ವರ್ಗದವರು ಕೋಣದ ಹಣೆ ತೊಳೆದು ಪೂಜೆ ಮಾಡುವುದು ಪದ್ಧತಿ. ಇಲ್ಲಿ ತನ್ನ ಗಂಡನನ್ನು ತಿರಸ್ಕರಿಸಿದವರೆ, ಮನೆ ಬಾಗಿಲಿಗೆ ಅವನನ್ನು ಕರೆದು ತಂದು, ಪೂಜೆ ಮಾಡುವ ಪದ್ಧತಿ ರೂಢಿಗೆ ತಂದಳು.

ಮಾರಮ್ಮನ ಕಥೆ ವರ್ಣಸಂಕರ ಸಂಭವಿಸಿದ್ದನ್ನು ಸೂಚಿಸುತ್ತದೆ. ಇಂತಹ ಘಟನೆಗಳು ಮುಂದೆಂದೂ ಸಂಭವಿಸಿದಂತೆ ಮುಜಾಗೃತೆ ವಹಿಸುವ ಮನೋಧರ್ಮಕ್ಕೆ ಹಿಡಿದ ಕನ್ನಡಿಯಾಗಿದೆ. ವರ್ಣಗಳ ನಡುವೆ ಪರಸ್ಪರ ವಿವಾಹ ನಿಷಿದ್ಧವಾಗಿದ್ದು ಇದನ್ನು ಭದ್ರಗೊಳಿಸುವುದು ಪಾಪಕರವೆಂಬ ಭಾವನೆ ಇಲ್ಲಿ ಎದ್ದು ಕಾಣುತ್ತದೆ. ಹೆಣ್ಣು ಮಕ್ಕಳಿಗೆ ತವರುಮನೆ ಗಂಡನ ಮನೆ ಎರಡು ಮನೆಗಳನ್ನು ಸಮವಾಗಿ ತೂಗಿಸಿಕೊಂಡು ಹೋಗುವ ಜವಾಬ್ದಾರಿ ಹೊಂದಿರುವುದನ್ನು ಕಾಣುತ್ತೇವೆ. ತನ್ನ ಅತ್ತೆಯು ಕೋಣದ ಮಾಂಸದ ರುಚಿಯನ್ನು ಸ್ಮರಿಸಿದ್ದೇ ಸೊಸೆಯೂ ತನ್ನ ಗಂಡನನ್ನು ಕೋಣವಾಗಿ ಹುಟ್ಟು ಎಂದು ಶಾಪ ಹಾಕಲು ಪ್ರೇರಣೆ ಆಗಿರಬೇಕು. ಕೆಳವರ್ಗದವರ ಆಹಾರ ಸರ್ವೇಸಾಮಾನ್ಯವಾಗಿ ಕೋಣದ ಮಾಂಸ. ಇದು ಮೇಲ್ವರ್ಗದವರಿಗೆ ಅಸಹನೀಯವಾಗಿದ್ದು ಸಹಜ. ಇಲ್ಲಿ ಗಂಡನಿಗೆ ಕೋಣವಾಗುವಂತೆ ಶಾಪ ಕೊಟ್ಟಿದ್ದು ಅವಳ ತವರು ಮನೆಯ ಹಂಬಲ, ಬೆಳೆದು ಬಂದ ಸಂಪ್ರದಾಯದ ಪ್ರಭಾವವನ್ನು ಕಾಣಬಹುದು. ಅದೇ ರೀತಿಯಾಗಿ ಹಸುವಿನ ಚರ್ಮವನ್ನು ಹದಮಾಡಿ ಅದರಿಂದ ಪಾದರಕ್ಷೆಯನ್ನು ತಯಾರು ಮಾಡುವ ಕಾಯಕದ ಬಗ್ಗೆ ಅವರಿಗೆ ಇರುವ ಅಸಹನೆಯೂ ಹಲವು ಕಥೆಗಳಲ್ಲಿ ವ್ಯಕ್ತವಾಗಿದೆ. ತನ್ನ ವೃತ್ತಿಯ

ಕಾರಣದಿಂದ, ಆಹಾರದ ಕಾರಣದಿಂದಲೇ ಕೀಳುಜಾತಿ ಎನಿಸಿಕೊಂಡ ಮಾದಿಗ ತರುಣ ಅದನ್ನು ಮುಚ್ಚಿಟ್ಟು ಮೇಲಿನ ವರ್ಗಕ್ಕೆ ಸೇರುವ ಪ್ರಯತ್ನ ಮಾಡಿ ಯಶಸ್ವಿಯಾಗುವ ಸ್ಥಿತಿಯಲ್ಲಿದ್ದಾಗ ಶಾಪಗ್ರಸ್ಥವಾಗಿ ಅಪರಾಧಿಯ ಸ್ಥಾನದಲ್ಲಿ ನಿಂತು ಬಲಿಯಾಗುವ ದುರಂತ ಪುರಾಣವಾಗಿದೆ. ಮನೆಯವರೆ ಅಮಾನುಷ್ಯವಾಗಿ ಋತುಮತಿಯಾದ ಸಂದರ್ಭದಲ್ಲಿ ಮನೆಯಿಂದ ಅಡವಿಗೆ ಅಟ್ಟಿದ್ದರು ಅದನ್ನೆಲ್ಲಾ ಲೆಕ್ಕಿಸದೇ ಅವಳ ಕೈ ಹಿಡಿದು ತನ್ನ ಬಾಳ ಸಂಗಾತಿಯಾಗಿ ಮಾಡಿಕೊಂಡ ಹೊಲೆಯನ ಪ್ರೀತಿಯೇ ಇಲ್ಲಿ ದೊಡ್ಡ ಅಪರಾಧವಾಗುತ್ತದೆ.ಮೇಲೆ ಹೇಳಿದ ಪುರಾಣ ಕಥೆಗಿಂತ ಭಿನ್ನವಾದ, ಸರಳವಾದ ಮಾರಮ್ಮನ ಕಥೆಗಳು ಪ್ರಚಲಿತವಾಗಿರುವದನ್ನು ಕಾಣಬಹುದು. ಈ ವಿವಾಹವು ಪ್ರತಿಲೋಮ ವಿವಾಹ ಪದ್ಧತಿಗೆ ಸಂಬಂಧಿಸಿದೆ. ಇಲ್ಲಿ ಉನ್ನತ ವರ್ಣದ ಹುಡುಗಿ ಕೆಳವರ್ಗದ ವ್ಯಕ್ತಿಯನ್ನು ವಿವಾಹವಾದಳು. ಇದು ಸಮಾಜದ ವಿರೋಧವನ್ನು ಪಡೆದುಕೊಂಡ ವಿವಾಹ ಪದ್ಧತಿಯಾಗಿದೆ. ಮಗನು ತಂದೆಯ ವೃತಿಯನ್ನು ಎಲೆಯಲ್ಲಿ ಕಲೆಯಾಗಿ ಅರಳಸಿ ತನ್ನ ಪ್ರತಿಭೆಯನ್ನ ಹೊರ ಹಾಕುತ್ತಾನೆ ಆ ಕಲೆಯೇ ಅವನ ಪಾಲಿಗೆ ಸಾವಿನ ಕರೆಯೊಲೆಯಾಗುತ್ತದೆ.

ಅರುಂಧತಿ: ಶೂದ್ರ ಸ್ತ್ರೀಯೊಬ್ಬಳು ಸವಾಲಾಗಿ ನಿಂತ ಕಥನ:-

ಈ ಕಥೆಯಲ್ಲಿ ಬರುವ ಹೆಣ್ಣು ಅರುಂಧತಿ ಇವಳು ಜಾಂಬವನ ಮಗಳು ಇವಳಿಗೆ ಅಕ್ಷಮಾಲೆ ಎಂಬ ನಾಮಾಂತರವಿದೆ. ಶಕ್ತಿ ಮಹರ್ಷಿಯ ಜನನಿ. ಇವಳು ಕೀಳು ಜಾತಿಯವಳು. ವಶಿಷ್ಠರು ಮೇಲು ಜಾತಿಯವರು ಇವರಿಬ್ಬರ ಮದುವೆಗೂ ಅಡ್ಡಿಯಾದದ್ದು ಮತ್ತೆ ಜಾತಿ ಆದರೆ ಇದರ ಹಿಂದೆ ಸ್ವಾರಸ್ಯವಾದ ಕತೆ ಇದೆ. ಅರುಂಧತಿಯ ಪ್ರಾಕೃತಿಕ ಶಕ್ತಿ ಯಾವ ಬಗೆಯದು ಎಂದರೆ ಅದನ್ನ ಪಂಚಾಂಗವೇ ವಿವರಿಸುತ್ತದೆ. "ಏನಯ್ಯ ಬ್ರಾಹ್ಮಣಯ್ಯ ಈ ಮೇಣದ ಕುಂಭ ಮಾಡಿ, ಅದಿಶೇಷನನ್ನು ಸಿಂಬೆ ಮಾಡಿ, ಮರಳು ಅನ್ನ ಮಾಡಿ, ಕಬ್ಬಿಣದ ಬೇಳೆ ಬೇಯಿಸಿ ಸಾರು ಮಾಡಿ, ಜಂಬೆಲೆ (ಸೀಗೆ ಎಲೆ) ಹೊಲಿದು ಊಟದೆಲೆ ಮಾಡಿ, ಊಟ ಬಡಿಸುವ ಪತಿವ್ರತೆಯೇ ನಿನಗೆ ತಕ್ಕ ಹೆಣ್ಣು"ಳ ಎಂದು ಮೇಲ್ವರ್ಗದ ಶಾಸ್ತ್ರ ಹೇಳುತ್ತದೆ.

"ವಶಿಷ್ಠರು ಇಂದ್ರನ ಆಸ್ಥಾನ ನರ್ತಕಿ ಊರ್ವಶಿಯ ಮಗ, ಅವಳು ಬ್ರಹ್ಮನ ಜೊತೆಗೂಡಿದಾಗ ಜನಿಸಿದವನೇ ವಶಿಷ್ಠ. ಮುಂದೆ ಅವನು ಮಹಾ ಋಷಿಯಾಗಿ, ಸೂರ್ಯ ವಂಶದ ರಾಜರ ಕುಲಪುರೋಹಿತನೂ ಆಗುತ್ತಾನೆ. ವಶಿಷ್ಟರಿಗೆ ಮದುವೆ ವಯಸ್ಸು ಬಂದಾಗ ತಾಯಿಯ ಬಳಿ ಬಂದು, ಮದುವೆಯಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆಗ ತಾಯಿ ನೀನು ಬ್ರಹ್ಮನ ಮಗ, ಈ ಕುಲದಲ್ಲಿ ನೀನೇ ಮೊದಲಿಗ, ಹೀಗಿರುವಾಗ ನಿನಗೆ ಹೆಣ್ಣು ತರುವುದಾದರೂ ಎಲ್ಲಿಂದ? ಅದು ಇರುವುದಾದರೂ ಎಲ್ಲಿ?ಎಂದು ಉತ್ತರಿಸುತ್ತಾಳೆ. ಆ ಉತ್ತರದಿಂದ ವಶಿಷ್ಠ ತೃಪ್ತನಾಗುವುದಿಲ್ಲ. ತನ್ನ ಹಠವನ್ನೇ ಮುಂದುವರೆಸುತ್ತಾನೆ. ಆಗ ತಾಯಿ ವಿಶ್ವಕರ್ಮನ ಬಳಿ ಬಂದು ತನ್ನ ಸಮಸ್ಯೆಯನ್ನು ಮುಂದಿಡುತ್ತಾಳೆ. ಆಗ ವಿಶ್ವಕರ್ಮ ಒಂದು ಪರಿಹಾರವನ್ನು ಸೂಚಿಸುತ್ತಾನೆ.

'ನಿಮ್ಮ ಕುಲದಲ್ಲಿ ಹೆಣ್ಣು ಇಲ್ಲದಿದ್ದರೆ ಏನಂತೆ? ಬೇರೆ ಕುಲದ ಹೆಣ್ಣನ್ನು ಮದುವೆಯಾಗಬಹುದು' ಎಂದು ಹೇಳಿ- 'ಆದರೆ ಆಕೆ ಪತಿವೃತೆ ಆಗಿದ್ದರೆ ಸಾಕು' ಎನ್ನುತ್ತಾನೆ. ದೇವಲೋಕದ ಊವರ್ಶಿಗೆ 'ಪತಿವೃತೆ' ಎಂಬುದನ್ನು ಪರೀಕ್ಷಿಸಲು ಬೇಕಾದ ಒಂದು ಸೂತ್ರವನ್ನು ತಿಳಿಸುತ್ತಾನೆ. ಅವನೇ-ಒಂದು ಮೂಟೆ ಮರಳು, ಒಂದು ಮೂಟೆ ಕಬ್ಬಿಣದ ಬೇಳೆ, ಒಂದು ಮೇಣದುಂಡೆ ಹಾಗೇ ಒಂದು ಜಂಬೆಲೆಯ ಕಟ್ಟು ಇಷ್ಟನ್ನೂ ಕೊಟ್ಟು, 'ಯಾರು ಈ ಮೇಣದ ಉಂಡೆಯಿಂದ ಮಡಕೆ ಮಾಡಿ, ಆ ಮಡಕೆಯಲ್ಲಿ ಆದಿಶೇಷನನ್ನು ಸಿಂಬೆ ಮಾಡಿಕೊಂಡು ನೀರು ತಂದು, ಆ ನೀರಿಗೆ

ಮರಳು ಸುರಿದು ಅನ್ನ ಮಾಡಲಿ, ಕಬ್ಬಿಣದ ಬೇಳೆ ಸುರಿದು ಸಾರು ಮಾಡಲಿ, ಹೀಗೆ ಅಡುಗೆ ಮಾಡಿ ಊಟಕ್ಕೆ ಬಡಿಸುವವಳು ಪತಿವ್ರತೆ ಎನಿಸುತ್ತಾಳೆ ಎಂದು ಹೇಳಿ ಕಳುಹಿಸುತ್ತಾರೆ.

ವಶಿಷ್ಠರು ಅಷ್ಟನ್ನೆಲ್ಲ ಹೊತ್ತು ಮೂರು ಲೋಕವನ್ನು ಅಲೆಯುತ್ತಾರೆ. ಅಷ್ಟೂ ದಿನವೂ ಅವರು ಉಪವಾಸವಿರಬೇಕಾಗುತ್ತದೆ. ಅಲೆದು ಅಲೆದು ಹಸಿವಿನಿಂದ ಒದ್ದಾಡುವಂತಾಗುತ್ತದೆ. ಎಲ್ಲಿಯೂ ಹೆಣ್ಣು ಸಿಕ್ಕುವುದಿಲ್ಲ. ಕೊನೆಯದಾಗಿ ಮತಂಗರ ಬೀದಿಗೆ ಬರುತ್ತಾರೆ. ಅಲ್ಲಿ ಜಾಂಬವನ ಮನೆಯ ಮುಂದೆ ನಿಂತು ಕ್ಷೀಣ ಸ್ವರದಲ್ಲಿ 'ಮನೆಯೊಳಗೆ ಯಾರು?'ಎಂದು ಕರೆಯುತ್ತಾನೆ. ಧ್ವನಿ ಕೇಳಿ ಅರುಂಧತಿ ಹೊರಗೆ ಬರುತ್ತಾಳೆ. ಆಕೆ ಮಹಾಸುಂದರಿ, ವಶಿಷ್ಠರು ಅವಳನ್ನು ಕಂಡು ಒಮ್ಮೆಗೆ ಮೋಹಿತರಾಗುತ್ತಾರೆ. ಆಗ ಆಕೆ-'ನಾವೂ ಮತಂಗ ಜಾತಿಯವರು, ನೀನು ಬ್ರಾಹ್ಮಣ, ನೀನು ಏಕೆ ಬಂದೆ?'ಎಂದು ನೇರವಾಗಿ ಪ್ರಶ್ನಿಸುತ್ತಾಳೆ.ಆದರೆ ವಶಿಷ್ಠರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ತಾನು ತಂದಿರುವ ವಸ್ತುಗಳಿಂದ ಅಡುಗೆ ಮಾಡಿ ಬಡಿಸುವಂತೆ ಕೋರುತ್ತಾನೆ. ಹಾಗೇ ಅದನ್ನು ಸಿದ್ಧಪಡಿಸುವ ವಿಧಾನವನ್ನು ವಿವರಿಸಿ ಹೇಳುತ್ತಾನೆ. ಆರುಂಧತಿ ಅದರಂತೆಯೇ ಅಡುಗೆ ಮಾಡಿ ಬಡಿಸುತ್ತಾಳೆ. ಅವನ ಖುಷಿಗೆ ಪಾರವೇ ಇಲ್ಲದಂತಾಗುತ್ತದೆ. 'ನೀನೇ ನನ್ನ ಹೆಂಡತಿ ಬಾ ಹೋಗೋಣ' ಎಂದು ಸೆರಗು ಹಿಡಿದು ಎಳೆಯುತ್ತಾನೆ. ಆಕೆ ಕೋಪಗೊಂಡು ವಿರೋಧಿಸುತ್ತಾಳೆ. ಅವನಿಗೆ ಅಸಹ್ಯ ಹುಟ್ಟುವಂತೆ ಮನೆಯಲ್ಲಿನ ಮಾಂಸಾಹಾರವನ್ನು ಅವನ ಕಣ್ಣಿಗೆ ಕಾಣುವಂತೆ ತೆರೆದಿಡುತ್ತಾಳೆ. ಆದರೆ ಅವನು ಯಾವುದಕ್ಕೂ ಬೇಸರಪಟ್ಟುಕೊಳ್ಳುವುದಿಲ್ಲ. ಅವಳ ಏಳು ಜನ ಅಣ್ಣಂದಿರೂ ಅವನಿಗೆ ಬೆದರಿಕೆ ಒಡ್ಡುತ್ತಾರೆ ಅದಕ್ಕೂ ಅವನು ಹೆದರುವುದಿಲ್ಲ. ಕೊನೆಗೆ ಅರುಂಧತಿ ಮದುವೆಗೆ ಒಪ್ಪುತ್ತಾಳೆ, ಇಬ್ಬರನ್ನು ಅವಳ  ಅಣ್ಣಂದಿರು ಮನೆಯಿಂದ ಹೊರಹಾಕುತ್ತಾರೆ.

ಹಾಗೆ ಮನೆಯಿಂದ ಹೋಗುವಾಗ ಅರುಂಧತಿ ಕೋಪದಿಂದ-'ನೀವು ಜೀವನವೆಲ್ಲ ಬಡವರಾಗಿಯೇ ಇರಿ, ಅದರಂತೆಯೇ ನರಳುವಂತಾಗಲಿ, ಕಷ್ಟ ಜೀವನ ನಿಮ್ಮ ಬೆನ್ನು ಬಿಡದೆ ಇರಲಿ' ಎಂದು ಶಪಿಸಿ ಹೊರಡುತ್ತಾಳೆ.ಆ ಶಾಪವೇ ಅವರ ಬಡತನಕ್ಕೆ, ಹೀನ ಸ್ಥಿತಿಗೆ ಕಾರಣ ಎಂಬ ನಂಬಿಕೆ ಅವರದು. ವಿಶ್ವಕರ್ಮನು ಕಾಶಿಯಲ್ಲಿ ಅರುಂಧತಿ-ವಶಿಷ್ಠರ ಮದುವೆ ಮಾಡಿಸುತ್ತಾನೆ."ಲಹಿಂದೂ ಧರ್ಮದಲ್ಲಿ ಅನುಲೋಮ ವಿವಾಹವು ಮದುವೆಯ ರೂಪವನ್ನು ಸೂಚಿಸುತ್ತದೆ. ವೈದಿಕ ಯುಗದಲ್ಲಿ ಅಂತರ-ವರ್ಗ ವಿವಾಹಗಳು ಅನುಲೋಮ ವಿವಾಹ ಪದ್ಧತಿಯಲ್ಲಿ ನಡೆಯುತ್ತಿದ್ದವು. ಅನುಲೋಮ ವಿವಾಹವು ಒಂದು ಸಾಮಾಜಿಕ ಪದ್ಧತಿಯಾಗಿತ್ತು. ಮೇಲ್ವರ್ಣ/ಜಾತಿ/ವರ್ಗದ ಹುಡುಗ ಕೆಳವರ್ಣ/ಜಾತಿ/ವರ್ಗದ ಹುಡುಗಿಯನ್ನು ಮದುವೆಯಾಗಬಹುದಾಗಿತ್ತು. ಅನುಲೋಮ ವಿವಾಹವನ್ನು ಪ್ರಾಚೀನ ಹಿಂದೂ ಕಾನೂನು ಬರಹಗಾರರು ಅಂದಿನ ಸಮಾಜದ ಮೊದಲ ಮೂರು ವರ್ಣಗಳು ಅಥವಾ ವರ್ಗಗಳಿಗೆ ಶಿಫಾರಸ್ಸು ಮಾಡಿದ್ದರು. ಅವುಗಳೆಂದರೆ ೧]ಬ್ರಾಹ್ಮಣ ೨] ಕ್ಷತ್ರಿಯ ೩]ವೈಶ್ಯ. ಧರ್ಮ ಶಾಸ್ತ್ರಕಾರರ ಪ್ರಕಾರ ಹುಡುಗಿ ತನ್ನ ಸ್ವಂತ ವರ್ಣದಲ್ಲಿ ಮದುವೆಯಾಗಬೇಕು. ವಿಫಲವಾದರೆ ಅವಳು ಯಾವುದಾದರು ಉನ್ನತ ವರ್ಣದಲ್ಲಿ ಮದುವೆಯಾಗಬಹುದು. ಇದು ಕೇವಲ ಮಹಿಳೆಗೆ ಮಾತ್ರ. ಈ ಕಥನದಲ್ಲಿ ಅರುಂಧತಿ- ವಶಿಷ್ಟರ ಮದುವೆಯು ಅನುಲೋಮ ಪದ್ಧತಿಯಲ್ಲಿ ಆಗಿದೆ.

ಅರುಂಧತಿ ಮತಂಗ ಜಾತಿಯ ಹೆಣ್ಣುಮಗಳು ಮಹಾಪತಿವೃತೆ. ಇಷ್ಟವಿಲ್ಲದೆ ವಶಿಷ್ಠರ ಪ್ರೀತಿಯ ಹುಚ್ಚಿಗೆ ಕಟ್ಟುಬಿದ್ದು ಮದುವೆಯಾಗುತ್ತಾಳೆ. ಆಗಲೂ ಅವಳು ಒಂದು ಕರಾರನ್ನು ವಶಿಷ್ಟರ ಮುಂದಿಡುತ್ತಾಳೆ. ನಾನು ನಿದ್ದೆಮಾಡುವಾಗ ಮಾತ್ರ ನನ್ನೊಂದಿಗೆ ಕೂಡಬಹುದು ಈ ರೀತಿಯಾಗಿ ಅವಳು ಕರಾರು ಹಾಕಲು ಕಾರಣ, ಅವಳಿಗೆ ಈ ಮದುವೆ ಇಷ್ಟ ಇಲ್ಲದಿರಬಹುದು ವಶಿಷ್ಠರ ಒತ್ತಾಯ ಮತ್ತು ತನ್ನ ತವರಿನ ರಕ್ಷಣೆಗಾಗಿಯೂ ಅವಳು ಈ ಮದುವೆಗೆ

ಒಪ್ಪಿರುವ ಸಾಧ್ಯತೆ ಇದೆ. ವಶಿಷ್ಟರು ಮಹಾ ಋಷಿ, ಮೇಲಾಗಿ ಶಕ್ತಿವಂತರು, ಮೇಲ್ವರ್ಗದವರು. ತಾನು ಅವರ ವಿರುದ್ಧವಾದರೆ ತನ್ನ ಪರಿವಾರದವರಿಗೆ ಉಳಿಗಾಲವಿಲ್ಲ. ಎಂದು ತಿಳಿದು ಅವಳು ವಶಿಷ್ಟರಿಗೆ ಮದುವೆ ಅಗಿರಬೇಕು. ಈ ಕಥೆಯಲ್ಲಿ ವಶಿಷ್ಠಿರಿಗೆ ಮೂರುಲೋಕ ಸುತ್ತಿದ್ದರು ಹೆಣ್ಣು ಸಿಗುವುದಿಲ್ಲ. ಕೊನೆಗೆ ಅನಿವಾರ್ಯವಾಗಿ ಅರುಂಧತಿಯ ಶಕ್ತಿಗೆ ಸೋತು ಅವಳೊಂದಿಗೆ ಮದುವೆ ಆಗುತ್ತಾರೆ. ಶಕ್ತಿವಂತಳು, ಪತಿವೃತೆಯೂ ಕೀಳು ಕುಲದಲ್ಲಿ ಇದ್ದರೆ ಅವಳೊಂದಿಗೆ ಅವಳ ಕುಲವನ್ನು ಕಾಲಾಂತರವಾಗಿ ಹೊಗಳಬೇಕಾಗುತ್ತದೆ ಎಂಬ ಕಾರಣಕ್ಕೂ ಅವಳನ್ನು ಮದುವೆಯ ಮುಖಾಂತರ ತಮ್ಮ ಕುಲದಲ್ಲಿ ಸೇರಿಸಿಕೊಳ್ಳುವ ಕುತಂತ್ರದ ಬುದ್ಧಿಯೂ ಈ ಕತೆಯಲ್ಲಿ ಕಾಣಬಹುದು.

ವಶಿಷ್ಠಿನ ಎದುರು ಶೂದ್ರ ಸ್ತ್ರೀ ಶಕ್ತಿಯೊಂದು ಸವಾಲಾಗಿ ನಿಲ್ಲುತ್ತದೆ. ಈ ಕಥೆಯಲ್ಲಿ ವಶಿಷ್ಠನ್ನು ಅರುಂಧತಿಯ ರೂಪಕ್ಕೆ ಮರುಳಾಗಿ ಅವಳನ್ನೆ ಮದುವೆಯಾಗಲು ಇಚ್ಚಿಸಿ ಉಪಾಯದಿಂದ ತಾನು ಏಳೇಳು ದಿನಗಳಿಂದ ಅನ್ನ ಕಾಣೆ, ವಿಪರೀತ ಹಸಿವು, ಅಡುಗೆ ಮಾಡಿ ಬಡಿಸು' ಎಂದು ಸುಳ್ಳು ಹೇಳುತ್ತಾನೆ. ನೀನು ಬ್ರಾಹ್ಮಣ, ನಾವು ಮತಂಗರು, ನಮ್ಮ ಕೇರಿಗೆ ಯಾಕೆ ಬಂದೆ? ಎಂಬ ಮಾತಿನಲ್ಲಿ ಅವರು ಶತಮಾನಗಳಿಂದ ಈ ಜಾತಿಯ ಹೆಸರಿನಿಂದಲೆ ತುಳಿತಕ್ಕೆ ಒಳಗಾಗಿರುವ ನೋವು ಈಗ ಕಿಡಿಯಾಗಿ ವಿರೋಧದ ಧ್ವನಿಯಲ್ಲಿ ಹೊರಬಂದಿದೆ. ತಾವು ಬ್ರಾಹ್ಮಣರಲ್ಲಿಗೆ ಹೊಗಬಾರದು ಎಂಬ ಸಮಾಜದ ನಿಯಮವನ್ನು ಚಾಚು ತಪ್ಪದೆ ಪಾಲಿಸುವ ನಿಷ್ಠೆಯನ್ನು ದಲಿತರಲ್ಲಿ ಕಾಣುತ್ತೆವೆ. ಜೊತೆಗೆ ನೀವು ಏಕೆ? ಬಂದಿರಿ, ನಿಮ್ಮಲ್ಲಿಗೆ ನಾವು ಬರದ ಹಾಗೆ ನಿಷೇಧವಿದ್ದ ಮೇಲೆ ನಮ್ಮಲ್ಲಿಯೂ ನೀವು ಬರುವಂತಿಲ್ಲ ಎಂಬ ಪ್ರತಿರೋಧದ ಧ್ವನಿಯನ್ನು ಕಾಣುತ್ತೇವೆ. ಹುಟ್ಟು, ಜಾತಿ, ಆಚಾರ ಮುಖ್ಯವಲ್ಲ, ಗುಣಶೀಲಗಳೇ ಮುಖ್ಯ ಎಂದು ಈ ಕತೆ ಸಾರುತ್ತದೆ.

ಇಲ್ಲಿ ವಶಿಷ್ಠರ ಸುಳ್ಳು ಅವರ ವಿವಾಹಕ್ಕೆ ಮತ್ತು ಬದುಕಿಗೆ ನಾಂದಿಯಾಗುತ್ತದೆ. ಅದೇ ಮಾರಮ್ಮನಿಗೇ ಮದುವೆಯಾದ ಹುಡುಗನ ಸುಳ್ಳು ಅವನ ಜೀವಕ್ಕೆ, ಅವನ ಸಮುದಾಯಕ್ಕೆ ಶಾಪವಾಗಿ ಪರಿಣಮಿಸುತ್ತದೆ. ಮಾರಿಯೂ ತನ್ನ ಮದುವೆ ದಲಿತನ ಜೊತೆಗೆ ನಡೆದಿದೆ ಎಂದು ತಿಳಿದ ತಕ್ಷಣ ಅವನಿಂದ ತನಗೆ ಹುಟ್ಟಿದ ಮಕ್ಕಳು ಮತ್ತು ಗಂಡನ ಜೀವ ತೆಗೆದುಕೊಳ್ಳುತ್ತಾಳೆ. ಅದೇ ದಲಿತ ಮಹಿಳೆಯಾದ ಅರುಂಧತಿಯೂ ಯಾವ ಸುಳ್ಳನ್ನು ಲೆಕ್ಕಿಸದೇ ವಶಿಷ್ಠರ ಜೊತೆಗೆ ತಮ್ಮ ವಿವಾಹದ ಬದುಕನ್ನು ಬದುಕುತ್ತಾಳೆ.

ಅರುಂಧತಿಯ ವಿವಾಹಕ್ಕೂ ಮುಂಚೆ ನಡೆಯುವ ಅವಳ ಪರೀಕ್ಷೆಯಲ್ಲಿ ಅವಳು ಹಾವಿನ ಸಿಂಬೆ, ಮರಳಿನ ಅನ್ನ, ಕಬ್ಬಿಣದ ಬೆಳೆ ಬೇಯಿಸಿ ಸಾರು ಮಾಡುವುದು, ಈ ಎಲ್ಲವು ಕಟ್ಟು ಕಥೆ ಎನ್ನಿಸಿದ್ದರು. ಈ ಎಲ್ಲದರಲ್ಲಿ ದಲಿತರ ಶ್ರದ್ಧೆ ಮತ್ತು ಅವರು ಹಸಿವೆಗೆ ಕೊಡುವ ಬೆಲೆಯನ್ನು ತೋರಿಸುತ್ತದೆ. ಎಂತಹದೆ ಸಂದರ್ಭ ಬಂದರು ಅವರು ಹಿಂದೇಟು ಹಾಕದೆ ಆ ಸವಾಲಿನಲ್ಲಿ ಗೆದ್ದು ಬರುವ ಛಲವನ್ನು ಹೊಂದಿದವರಾಗಿರುವುದನ್ನು ಕಾಣುತ್ತೇವೆ. ವಶಿಷ್ಠರು ಮನೆಯ ಬಾಗಿಲಿಗೆ ಬಂದಾಗ ತನ್ನ ಮನೆಯ ಹಿರಿಯರು ಇಲ್ಲ ಅವರು ಬಂದ ಮೇಲೆ ಬರುವುದಾಗಿ ತಿಳಿಸುವ ಅವಳ ಮಾತಿನಲ್ಲಿ ಸಂಬಂಧಕ್ಕೆ ಕೊಡುವ ಮಹತ್ವವನ್ನು ಸಾರುತ್ತದೆ. ವಶಿಷ್ಠರು ಅವಳ ಕೈ ಹಿಡಿಯಲು ಬಂದಾಗ ತಾನು ಕಿಳು ಕುಲದವಳು ತನ್ನನ್ನು ವರಿಸಬೇಕಾದರೆ ಅವಳ ಕುಲದ ಜೊತೆಗೆ ವರಿಸಬೇಕು. ಯಾವ ಆಹಾರದಿಂದ ಅವರನ್ನು ತಿರಸ್ಕರಿಸಿ, ಅವಮಾನ ಮಾಡಿದ್ದರೊ, ಕೀಳೆಂದು ಊರ ಹೋರಗೆ ಇಟ್ಟಿದ್ದರೊ. ಈಗ ಅವರ ಮನೆಯ ಹೆಣ್ಣಿಗಾಗಿ ಇಲ್ಲಿಯವರೆಗೆ ಹೂಡುಕಿಕೊಂಡು ಬಂದಿರುವಿರಲ್ಲಾ? ಆದ ಕಾರಣ ನೀವು ಮೊದಲು ನಮ್ಮ ಮೂಲ ಆಹಾರವಾದ'ಮಾಂಸ'ವನ್ನು ಸೇವಿಸಿ. ನಂತರ ನನ್ನನ್ನು ಕರೆದುಕೊಂಡು ಹೋಗಿ. ಎಂದು ಅರುಂಧತಿ ಹೇಳಿರುವ ಸಾದ್ಯತೆಗಳು ಇವೆ. ಬ್ರಾಹ್ಮಣರಿಂದ ಈ ಕಥೆ ತಿರುಚಿರಲುಬಹುದು. ತಮ್ಮ ಶಕ್ತಿಗೆ ತಕ್ಕ ಹೆಣ್ಣು ಬೇರೆ ಜಾತಿಯಲ್ಲಿ

ಇದ್ದರು ಅವಳನ್ನು ವರಿಸರಬೇಕು ಎಂದು ವಿಶ್ವಕರ್ಮರು ಹೇಳಿದ್ದರಿಂದ ವಶಿಷ್ಟರು ಅರುಂಧತಿಯ ಈ ಷರತ್ತಿಗೆ ಒಪ್ಪಿರಲು ಬಹುದು. ಅದಕ್ಕಾಗಿಯೆ ಅರುಂಧತಿ ತನ್ನ ಶಕ್ತಿಯಿಂದ ಮನೆಯಲ್ಲಿ ಮಾಂಸದ ಮುಂದೆಗಳನ್ನು ಚೆಲಾಡಿದ್ದರು ವಶಿಷ್ಟರು ಅವಳನ್ನೆ ವಿವಾಹ ಆಗುವ ಹಟ ಹಿಡಿಯುತ್ತಾರೆ. ಇಲ್ಲಿ ಅರುಂಧತಿ ಎಂತಹ ಸಂದರ್ಭದಲ್ಲಿಯೂ ತನ್ನ ಸ್ವಾಭಿಮಾನ ಮತ್ತು ಹುಟ್ಟಿನ ಗುರುತನ್ನು ಮರೆಯುವುದಿಲ್ಲ. ದಲಿತರಿಗೆ ಬದುಕು ಮುಖ್ಯವಾಗುತ್ತದೆ. ಕ್ಷಮಾಗುಣವು ಅವರ ಮೂಲ ನೆಲೆಯಾಗಿದೆ.ಇವರು ಬದುಕಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಬದುಕನ್ನ ಪ್ರೀತಿಸುತ್ತಾರೆ. ಅದಕ್ಕೆ ಅರುಂಧತಿ ವಶಿಷ್ಠರ ಜೊತೆಗೆ ಹೋದದ್ದು ಅದೆ ಬದುಕಿಗಾಗಿಯೇ ದಲಿತ ಹುಡುಗ ಮಾರಮ್ಮನ ಗಂಡನಾಗ ಬಯಸಿದ್ದು.

ಹೀಗೆ ಒಟ್ಟಾರೆ ಹೇಳುವುದಾದರೆ ದಲಿತ ಜಗತ್ತು ತನ್ನ ಅಸ್ಥಿತ್ವವನ್ನು ಸ್ಥಿರಗೊಳಿಸಲು ಭೌತಿಕವಾಗಿಯಲ್ಲದೆ, ಪುರಾಣ, ಐತಿಹ್ಯ ಕಥೆಗಳ ಮೂಲಕವೂ ಅಪ್ರತ್ಯಕ್ಷವಾಗಿ ದಲಿತತ್ವದ ನೆಲೆಯನ್ನು ಗಟ್ಟಿಗೊಳಿಸಲು ಜನಪದರು ಪ್ರಯತ್ನಿಸಿದ್ದಾರೆ. ಈ ಜನಪದ ಕಥೆಗಳು ಇಂದಿನ ೨೧ನೇ ಶತಮಾನದ ಮರ್ಯಾದೆ ಹತ್ಯೆಗಳ ಹಿನ್ನೆಲೆಯಲ್ಲಿಯೂ ಕಾಣಬಹುದು ಅಂತರಜಾತಿ ವಿವಾಹದ ಸಮಸ್ಯೆಗಳು ಇಂದು ನಿನ್ನೆಯದಲ್ಲ ಇದು ತಲ ತಲಾಂತರದಿಂದ ದೊಡ್ಡ ಪಿಡುಗಾಗಿ ಇಂದಿಗೂ ಕಾಡುತ್ತಲೇ ಇವೆ.

ಕೊನೆ ಟಿಪ್ಪಣಿ

೧, ಗ್ರಾಮದೇವತೆಗಳು.ಪು.ಸಂ,೪೮.

೨,ಅದೆ.

೩,ಅದೆ.ಪು.ಸಂ,೪೯

೪, ಆಧುನಿಕ ಭಾತದಲ್ಲಿ ಎರಡು ಆಂದೋಲನಗಳು,ಪು,ಸಂ,೨೯.

೫, ಅದೆ.

೬,ಅದೆ.

೭,ಅದೆ.

೮,ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೩.ಪು,ಸಂ ೧೭.

ಪರಾಮರ್ಶನ ಗ್ರಂಥಗಳು:-

೧. ಪ್ರ. ಸಂ. ಪ್ರೊ. ಅರವಿಂದ ಮಾಲಗತ್ತಿ, ಸಂ.ಡಾ. ಕೃಷ್ಣಮೂರ್ತಿ ಹನೂರು, ಡಾ. ಮೈಲಹಳ್ಳಿ ರೇವಣ್ಣ, ಡಾ. ಎನ್.ಎಸ್. ತಾರಾನಾಥ- ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೩ ಜಾನಪದ ಶಾಸನ-ಕೈಫಿಯತ್ತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೨೦೧೪.

೨. ಡಾ. ಡಿ. ಶಿವನಂಜಯ್ಯ-ಜನಪದ ಸಾಹಿತ್ಯದಲ್ಲಿ ಬಂಡಾಯದ ನೆಲೆಗಳು, ಪ್ರಕಾಸಿರಾ ಪಬ್ಲಿಸಿಂಗ್ ಹೌಸ್ ಮೈಸೂರು-೨೦೧೭

೩. ಪಂಡಿತ ಐರೋಡಿ ಯಜ್ಞನಾರಾಯಣ ಉಡಪ-ಪುರಾಣ-ಭಾರತ ಕೋಶ.ಸಪ ಬುಕ್ ಹೌಸ್ ಗಾಂಧಿನಗರ ಬೆಂಗಳೂರು,ಅಗಸ್ಟ್ ೨೦೧೨

೫. ಡಾ. ಸಿದ್ಧಲಿಂಗಯ್ಯ ಗ್ರಾಮದೇವತೆಗಳು, ಅಂಕಿತ ಪುಸ್ತಕ ಬಸವನಗುಡಿ,ಬೆಂಗಳೂರು ೨೦೦೯